ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

6

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 30|1|21

ಸಿಎಂ, ಸ್ಪೀಕರ್, ಮನವಿಗೂ ಪಟ್ಟು ಸಡಿಲಿಸದ ಸಿದ್ದು : ಮುಂದೂಡಲ್ಪಟ್ಟ ಸಭೆ

# ಕಲಾಪ ಸಲಹಾ ಸಮಿತಿಗೆ ಕೈ ಬಹಿಷ್ಕಾರ

ಬೆಂಗಳೂರು: ವಿಧಾನಸಭೆಯ ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಗೆ ಕಾಂಗ್ರೆಸ್ ಬಹಿಷ್ಕಾರ ಹಾಕಿದ ಹಿನ್ನೆಲೆಯಲ್ಲಿ ವಿಪಕ್ಷ ನಾಯಕರ ಮನವೊಲಿಕೆಗೆ ನಡೆಸಿದ ಪ್ರಯತ್ನಗಳು ಫಲ ನೀಡದೆ, ಸಭೆ ಮುಂದೂಡಲಾಗಿದೆ. ಬೆಳಗ್ಗೆ 10 ಗಂಟೆಗೆ ನಡೆಯಬೇಕಾಗಿದ್ದ ಸಭೆ ತಡವಾಗಿ ಪ್ರಾರಂಭವಾಯಿತು. ಸಿಎಲ್‌ಪಿ ನಿರ್ಧಾರದಂತೆ ಸಭೆಗೆ ಗೈರಾಗಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವೊಲಿಕೆ ಮಾಡಲು ಗೃಹ ಸಚಿವ ಬಸವರಾಜ ಬೊಮ್ಮಾಯಿ ಪ್ರಯತ್ನ ಮಾಡಿದ್ದು ಪ್ರಯೋಜನವಾಗಲಿಲ್ಲ. ಖುದ್ದು ಮುಖ್ಯಮಂತ್ರಿ ಯಡಿಯೂರಪ್ಪ ಅವರೇ ಫೋನಾಯಿಸಿ, ತಪ್ಪು ಒಪ್ಪು ಏನೇ ಇದ್ದರೂ ಸಭೆಯಲ್ಲಿ ಮಾತನಾಡೋಣ. ಪಟ್ಟು ಸಡಿಲಿಸಿ ಮೊದಲು ಸಭೆಗೆ ಬರುವಂತೆ ಮನವಿ ಮಾಡಿದರೂ ಸಿದ್ದರಾಮಯ್ಯ ಒಪ್ಪಲಿಲ್ಲ. ಸ್ಪೀಕರ್, ಬೊಮ್ಮಾಯಿ ಪ್ರತ್ಯೇಕವಾಗಿ ಮಾತನಾಡಿ ಮನವಿ ಮಾಡಿದರೂ ಪಟ್ಟು ಸಡಿಲಿಸದಿದ್ದರಿಂದ ಅನಿವಾರ್ಯವಾಗಿ ಸಭೆಯನ್ನು ಮುಂದೂಡಲಾಯಿತು. ಕಳೆದ ಅಧಿವೇಶನ ಅವಧಿಯಲ್ಲಿ ಸದನ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತಾಪವನ್ನೇ ಮಾಡದೆ ಗೋಹತ್ಯೆ ನಿಷೇದ ಕಾಯಿದೆ ಮಂಡಿಸಿದ್ದರ ಬಗ್ಗೆ ಆಕ್ರೋಶಗೊಂಡಿರುವ ವಿರೋಧ ಪಕ್ಷ ಸಭೆಯನ್ನು ಬಹಿಷ್ಕರಿಸುವುದಾಗಿ ಪತ್ರ ಬರೆದಿತ್ತು.

ನಾವು ಹೇಳಿದ್ದನ್ನು ಸರ್ಕಾರ ಪರಿಗಣಿಸಲಿಲ್ಲ ಎನ್ನುವ ಅಸಮಾಧಾನ ವಿಪಕ್ಷ ನಾಯಕರಿಗಿದೆ. ಈ ಬಾರಿ ಆ ರೀತಿ ಆಗದಂತೆ ನೋಡಿಕೊಳ್ಳುವ ಭರವಸೆ ನೀಡಿದ್ದೇನೆ.

| ಬಸವರಾಜ ಬೊಮ್ಮಾಯಿ ಗೃಹ ಸಚಿವ

## ಕರ್ನಾಟಕವೇ ಮುಂಚೂಣಿ

» ನಿಲ್ದಾಣಗಳಲ್ಲಿ ಜಿಐ ಟ್ಯಾಗ್ ಉತ್ಪನ್ನ ಮಳಿಗೆ

ಜಿಐ ಟ್ಯಾಗ್ (ಭೌಗೋಳಿಕ ಗುರುತು) ಹೊಂದಿದ ರಾಜ್ಯದ ಉತ್ಪನ್ನಗಳಿಗೆ ಉತ್ತೇಜನ ನೀಡಲು ಬೆಂಗಳೂರು ಸೇರಿ ದೇಶದ ವಿವಿಧ ವಿಮಾನ ನಿಲ್ದಾಣ, ಪ್ರಮುಖ ರೈಲು, ಬಸ್ ನಿಲ್ದಾಣಗಳಲ್ಲಿ ಪ್ರದರ್ಶನ- ಮಾರಾಟಕ್ಕೆ ವ್ಯವಸ್ಥೆ ಮಾಡಲು ಸರ್ಕಾರ ನಿರ್ಧರಿಸಿದೆ. ಪ್ರಶ್ನೋತ್ತರ ವೇಳೆ ಅಬ್ಬಯ್ಯ-ಪ್ರಸಾದ್ ಪ್ರಶ್ನೆಗೆ ಉತ್ತರಿಸಿದ ಕೈಗಾರಿಕೆ ಸಚಿವ ಜಗದೀಶ್ ಶೆಟ್ಟರ್, ಇಡೀ ರಾಷ್ಟ್ರದಲ್ಲಿ ಸುಮಾರು 370 ಜಿ.ಐ. ಟ್ಯಾಗ್ ವಸ್ತುಗಳಿವೆ. ಆದರಲ್ಲಿ ರಾಜ್ಯದ್ದು 42. ಈ ಪ್ರದೇಶದಲ್ಲಿ ಕರ್ನಾಟಕದಲ್ಲೇ ಹೆಚ್ಚು ಜಿಐ ಟ್ಯಾಗ್ ಹೊಂದಿದ ಉತ್ಪನ್ನಗಳಿವೆ. ಏರ್‌ಪೋರ್ಟ್ ಅಥಾರಿಟಿ ಜತೆ ಸಮಾಲೋಚನೆ ಮಾಡಿ, ಅಲ್ಲೊಂದು ಮಳಿಗೆ ಪಡೆದು ಪ್ರದರ್ಶನಕ್ಕೆ ಏರ್ಪಾಡು ಮಾಡುತ್ತೇವೆ. ಈ ನಿಟ್ಟಿನಲ್ಲಿ ಪ್ರಯತ್ನ ನಡೆಯುತ್ತಿದೆ ಎಂದರು. ಆಜಿಐ ಉತ್ಪನ್ನಗಳಿಗೆ ಇ-ಕಾಮರ್ಸ್ ಮೂಲಕ ಮಾರುಕಟ್ಟೆ ಸೌಲಭ್ಯ ಒದಗಿಸಲು ಅಮೆಜಾನ್, ಫ್ಲಿಪ್‌ಕಾರ್ಟ್ ಸಹಯೋಗದೊಂದಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.